# ಇಬ್ಬರ್ಹೆಂಡಿರ ಸುಖವು ಇಂದು ಕಂಡೆನಯ್ಯ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 474.
2. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Prof. S.K. Ramachandra Rao and also in the books of Samagra Dasa Sahitya, published by Kannada & Culture Dept., Govt of Karnataka, Bengaluru and also in the books of Gorebala Hanumantha Rayaru.

ರಾಗ: ಕಾಂಭೋಜ ತಾಳ: ಅಟ

ಇಬ್ಬರ್ಹೆಂಡಿರ ಸುಖವು ಇಂದು ಕಂಡೆನಯ್ಯ || ಪ ||
ಅಬ್ಬಬ್ಬ ಎಂದಿಗೂ ಸಾಕು ಸಾಕಯ್ಯ || ಅಪ ||

ಒಬ್ಬಳಲಿ ಪೋಗಿ ಒಗರವ ಮಾಡೆನ್ನಲು
ಬೊಬ್ಬೆ ಏನಿದು ಕೊಬ್ಬೆ? ನಡೆಯೆಂದಳು
ತಬ್ಬಿಬ್ಬುಗೊಂಡು ಇನ್ನೊಬ್ಬಳನು ಮಾಡೆನಲು
ಅಬ್ಬಾ ಬಿಸಿ ಮುಟ್ಟಲಾಪೆನೆ ಎಂದಳು || ೧ ||

ಹಿರಿಯವಳ ಕೂಡಿ ಸರಸವಾಡುವೆನೆಂದು
ಇರುಳು ಉಪ್ಪರಿಗೆ ನಾನೇರುತಿರಲು
ಚರಣವೊಬ್ಬಳು ಪಿಡಿದು ಶಿರವನೊಬ್ಬಳು ಪಿಡಿದು
ಸರಸರನೆ ಕೆಳಗೆ ಮೇಲೆಳೆಯುತಿಹರಯ್ಯ || ೨ ||

ಅವಳ ಮಗ್ಗುಲೊಳಿರಲು ಇವಳ ಮಗ್ಗುಲ ಕಾಟ
ಇವಳ ಮಗ್ಗುಲೊಳಿರಲು ಅವಳ ಕಾಟ
ಅವಳಿಂದ ಸುಖವಿಲ್ಲ ಇವಳಿಂದ ಫಲವಿಲ್ಲ
ಇವರಿಬ್ಬರ ಸಂಗ ಅಭಿಮಾನ ಭಂಗ || ೩ ||

ಎರೆದುಕೊಂಬುವೆನೆಂದು ಎಣ್ಣೆ ಬಿಸಿಮಾಡಿ ನಾ
ಕಿರಿಯವಳ ಕೂಡಿ ಒರಸಿಕೊಳುತಿರಲು
ಹಿರಿಯವಳು ಮುನಿದು ಬಂದಾಗ ನೀರಿನ ಗಡಿಗೆ ಒಡೆದು
ನಿರ್ವಾಣದಲಿ ಕುಳ್ಳಿರಿಸಿದಳು || ೪ ||

ಅಂಗವರ್ಧಭಾಗ ಅನುದಿನದಿ
ಹಿಂಗದೆ ತಾವು ಕೂಡಿ ಒತ್ತುತಿರಲು
ಮಂಗಳಾಂಗ ಶ್ರೀ ಪುರಂದರವಿಠಲನೆ
ಅಂಗವನೆ ಮುರಿದು ಮೂಲೆ ಕುಳಿಸಿದರೆನ್ನ || ೫ ||

**Classification:** Keerthane
**Ankita:** Sri Purandara Vittala
**Location:** NA
**Category:** Samsara Chitragalu
**Sub-Category:** hendati, patni, sukha, irulu, phala, sittu, dina, mangala,
**Pravachana:** NA
**Explanation:** NA